**ದಿನಾಂಕಃ 19/03/2025 ರಂದು ಅಸಾಃ 4 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

## ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ ವಿ ಜಿ ವಕೀಲರಿಂದಃ

ಗಲಾಟೆಯಾದಗ ನಾನು ಮನೆಯಲ್ಲಿದೆ, ಯಾರು ಹೇಳಿದರು ಎಂದು ಗೊತ್ತಿಲ್ಲ. ಗಲಾಟೆಯ ದಿನಾಂಕ, ತಿಂಗಳು ಹೇಳಲು ಆಗುವುದಿಲ್ಲ ಎಂದರೆ ಸರಿ. ಸಂಜೆ 5.00-5.30 ಗಂಟೆ ಸಮಯದಲ್ಲಿ ಗಲಾಟೆಯಾಗಿರುತ್ತದೆ. ಚಾಸಾ-2 ರವರನ್ನು ಯಾರು ಕಂಬಕ್ಕೆ ಕಟ್ಟಿ ಹಾಕಿದ್ದರು ಎಂದು ಗೊತ್ತಿಲ್ಲ ಎಂದರೆ ಸರಿ. ನಾವು ಸ್ಥಳಕ್ಕೆ ಹೋದಾಗ ಸುಮಾರು 150 ಜನರು ಸೇರಿದ್ದರು. ಅವರೆಲ್ಲರ ಹೆಸರು ಹೇಳಲು ಆಗುವುದಿಲ್ಲ ಎಂದರೆ ಸರಿ.

ಗಲಾಟೆಯಲ್ಲಿ ಯಾರು ಯಾರಿಗೆ ಹಲ್ಲೆ ಮಾಡಿದ್ದಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ ಎಂದು ನುಡಿಯುತ್ತಾರೆ. ಚಾಸಾ-1, 3, 5 ರಿಂದ 7 ರವರಿಗೆ ಎಲ್ಲೆಲ್ಲಿ ಏಟಾಗಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ಗಲಾಟೆ ಮುಗಿದಿತ್ತು ಎಂದರೆ ಸರಿಯಲ್ಲ.

ಈ ಗಲಾಟೆಯ ಮುಂಚಿತವಾಗಿ ಗೂಡ್ಸ್ ಗಾಡಿಯ ವಿಚಾರವಾಗಿ ಗಲಾಟೆಯಾಗಿತ್ತು ಎಂದರೆ ಸರಿ. ಆ ದಿನ ಯಾರಿಗೂ ಏಟಾಗಿರುವುದಿಲ್ಲ. ಆರೋಪಿತರ ಹಾಗೂ ನಮ್ಮ ಮದ್ಯೆ ಯಾವುದೇ ದ್ವೇಷ ಇರುವುದಿಲ್ಲ.

ಪೊಲೀಸರಿಗೆ ಹೇಳಿಕೆ ಕೊಟ್ಟ ದಿನಾಂಕ ಹೇಳಲು ಬರುವುದಿಲ್ಲ. ನ್ಯಾಯಾಲಯದ ಮುಂದಿರುವ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಯಾರು ಯಾರು ಯಾವ ದೊಣ್ಣೆಯನ್ನು ಹಿಡಿದುಕೊಂಡಿದ್ದರು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಇದೇ ದೊಣ್ಣೆಯನ್ನು ಆರೋಪಿತರು ಹಿಡಿದುಕೊಂಡಿದ್ದರು ಎಂದರೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಗುಂಪಿನಲ್ಲಿ ಜಗಳ ಬಿಡಿಸಿದವರು ಯಾರು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿ. ಮುಮಾ-1 ತರಹ ಹಗ್ಗ ನಮ್ಮ ಊರಿನಲ್ಲಿ ಎಲ್ಲರ ಮನೆಯಲೂ ಇರುತ್ತದೆ ಎಂದರೆ ಸರಿ. 1 ಮತ್ತು 2ನೇ ಆರೋಪಿತರು ನನಗೆ

ಜಾತಿ ನಿಂದನೆ ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾರೆ. ಗಲಾಟೆಯಾದ ದಿನವೇ ಸಂಜೆ 6.00 ಗಂಟೆಗೆ ಆಸ್ಪತ್ರೆಗೆ ಹೋಗಿರುತ್ತೇನೆ.

ನ್ಯಾಯಾಲಯದ ಮುಂದಿರುವ ಆರೋಪಿತರು ಯಾರಿಗೂ ಕೊಲೆ ಬೆದರಿಕೆ ಹಾಕಿಲ್ಲ ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ವೈದ್ಯರ ಹತ್ತಿರ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರು

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ